ದಿನಾಂಕಃ 02.06.2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲುಃ ಶ್ರೀಮತಿ ಕೆ ಜಿ ಕೆ ವಕೀಲರಿಂದಃ

ನನ್ನ ತಾಯಿ ಆರೋಗ್ಯವಾಗಿದ್ದಾರೆ ಎಂದರೆ ಆಕೆಯ ಆರೋಗ್ಯ ಸ್ಥಿತಿ ಸರಿ ಇಲ್ಲ. ಆಕೆ ನನ್ನ ಹಾಗೂ ನನ್ನ ಅಕ್ಕನ ಮನೆಯಲ್ಲಿ ವಾಸ ಇರುತ್ತಾರೆ. ನನ್ನ ಅಜ್ಜಿ ನನ್ನ ತಾಯಿ ಹೆಸರಿಗೆ ಮಾಡಿದ್ದಾರೆ ಎನ್ನುವ ಮೂಲ ವಿಲ್ ನನ್ನ ಬಳಿ ಇಲ್ಲ. ನಿಡಿ 12 ರಂತೆ ನನ್ನ ಅಜ್ಜಿ ಖರೀದಿಸಿದ ಆಸ್ತಿಯನ್ನು ವಿಲ್ ಮೂಲಕ ನನ್ನ ತಾಯಿ, ಆಕೆಯ ಸಹೋದರ ರಾಮಕೃಷ್ಣ , ಆಕೆಯ ಸಹೋದರಿ ಲಲಿತಾ ರವರಿಗೆ ಮಾತ್ರ ನೀಡಿದ್ದಾರೆ ಎಂದರೆ ಸರಿ .

2. ವಾದಿ ಲೋಕೇಶ್ ನನ್ನ ತಾಯಿ ತಮ್ಮ ಎಂದರೆ ಸರಿ . ತಿಮ್ಮಮ್ಮ ರವರು ಪಾರ್ವತಮ್ಮ ರವರಿಂದ 22 ಅಡಿ ಇಂಟು 26 ಅಡಿ ಆಸ್ತಿಯನ್ನು ಖರೀದಿ ಮಾಡಿದ್ದರು ಎಂದರೆ ಸರಿ . ಆ ಸಂಪೂರ್ಣ ಆಸ್ತಿ ವಿಲ್ ಮೂಲಕ ಲೋಕೇಶ್ ರವರಿಗೆ ಹೋಗಿದೆ ಎಂದರೆ ಗೊತ್ತಿಲ್ಲ. ಲಲಿತಮ್ಮ , ರಾಮಕೃಷ್ಣ , ಅನುಸೂಯ ರವರಿಗೆ ಬಂದ ಆಸ್ತಿಯ ಹಿಂಭಾಗದಲ್ಲಿ ವಾದಿ ಲೋಕೇಶನ ಹೆಸರಿಗೆ 22 ಇಂಟು 26 ಅಡಿ ಆಸ್ತಿ ಬಂದಿದೆ ಎಂದರೆ ಸರಿ .

3. ಅನುಸೂಯಮ್ಮ ರವರಿಗೆ ಬಂದಿರುವ ಆಸ್ತಿಯ ಪಶ್ಚಿಮಕ್ಕೆ ರಾಮಕೃಷ್ಣ ರವರ ಜಾಗ , ಪೂರ್ವಕ್ಕೆ 4 ಅಡಿ ಓಣಿ ಆದ ನಂತರ ಸರಸಮ್ಮ ರವರ ಜಾಗ ಇದೆ ಎಂದರೆ ನಮ್ಮ ಸೈಟಿನ ಪಕ್ಕ ಸರಸ್ವತಿಯ ಜಾಗ ಇದೆ ಎಂದು ನುಡಿಯುತ್ತಾರೆ. ಅನುಸೂಯಮ್ಮ ರವರ ಜಾಗದ ಉತ್ತರಕ್ಕೆ ವಾದಿ ಲೋಕೇಶ ರವರ ಜಾಗ ಹಾಗೂ ದಕ್ಷಿಣಕ್ಕೆ ರಸ್ತೆ ಬರುತ್ತದೆ ಎಂದರೆ ಸರಿ . ಲೋಕೇಶರವರ ಜಾಗದ ಉತ್ತರಕ್ಕೆ ಶಾರದಮ್ಮ ರವರ ಮನೆ ಇದೆ ಎಂದರೆ ಸರಿ . ದಕ್ಷಿಣಕ್ಕೆ ಅನುಸೂಯಮ್ಮ , ರಾಮಕೃಷ್ಣಪ್ಪ ರವರ ಸ್ವಲ್ಪ ಭಾಗದ ಜಾಗ ಹಾಗೂ ಓಣಿ ಇದೆ ಎಂದರೆ ಮೊದಲಿಗೆ ಓಣಿ ಇತ್ತು ಈಗ ಇಲ್ಲ ಎಂದು ನುಡಿಯುತ್ತಾರೆ.

4. ಲೋಕೇಶರವರ ಜಾಗದ 4 ಅಡಿ ನಂತರ ಪೂರ್ವಕ್ಕೆ ತುಳಸಮ್ಮ ರವರ ಮನೆ ಇದೆ ಎಂದರೆ ಸರಿ . ಪಶ್ಚಿಮಕ್ಕೆ ಹನುಮಂತಪ ರಾವ್ ರವರ ಜಾಗ ಇದೆ ಎಂದರೆ ಯಾರ ಜಾಗ ಇದೆ ಎಂದು ಹೆಸರು ಗೊತ್ತಿಲ್ಲ. ನಿಡಿ1 ನ್ನು ತೋರಿಸಿ ಅದರಲ್ಲಿ ಕಾಣುಳ ಕಲ್ಲು ಕಂಬ ನೀವು ನೆಟ್ಟಿದ್ದೀರಾ ಎಂದರೆ ನಾವು ನೆಟ್ಟಿರುವುದು ಅಲ್ಲ. ದಾಖಲೆಯಲ್ಲಿ ಕಾಣುವ ಕಲ್ಲು ಇರುವ ಸ್ಥಳದಿಂದ 20 ಅಡಿ ವರೆಗೂ ಸರಸ್ವತಿ ರವರು ನೆಟ್ಟಿದ್ದರು ಅದರ ಹಿಂದೆ ತಿಮ್ಮಮ್ಮ ರವರು ನೆಟ್ಟಿದ್ದಾರೆ. ಈಗ ಸದರಿ ಕಲ್ಲು ಅಲ್ಲಿ ಇರುವುದಿಲ್ಲ. ಸರಸ್ವತಿ ಅವರು 20 ಅಡಿ ಕಲ್ಲನ್ನು ತೆಗೆದು ಮನೆ ಕಟ್ಟಿದ್ದಾರೆ. ಉಳಿದ ಕಲ್ಲು ಹಾಗೆಯೇ ಇದೆ.

5. ನಿಡಿ2 ರ ಚಿತ್ರಣ ಸರಸ್ವತಿ ಅವರು ಮನೆ ಕಟ್ಟುವ ಕಾಲಕ್ಕೆ ಕಲ್ಲು ತೆಗೆದು ಹಾಕಿರುವ ಕುರಿತಾದ ಚಿತ್ರಣ ಇರುತ್ತದೆ. ಸರಸ್ವತಿ ಅವರು ಆಕೆಯ ಅಳತೆಗೂ ಮೀರಿ ಕನ್ಸರವೆನ್ಸಿಯನ್ನು ಒತ್ತುವರಿ ಮಾಡಿಕೊಂಡು ಮನೆ ಕಟ್ಟಿದ್ದಾರೆ. ಈ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಅಲ್ಲಿ ಯಾವುದೇ ಕನ್ಸರವೆನ್ಸಿ ಇರಲಿಲ್ಲ ಎನ್ನುವುದು ಸರಿಯಲ್ಲ.

6. ನಿಪಿ12 ರಲ್ಲಿ ಲೋಕೇಶ್ ರವರಿಗೆ ಬಂದ 22 ಇಂಟು 26 ಅಡಿ ಜಾಗದ ಮುಂದುವರೆದ , ಅವರು ಓಡಾಡಲು ಬಳಸುತ್ತಿದ್ದ ಜಾಗ ಕಂಡುಬರುತ್ತದೆ ಎಂದರೆ ಸರಿಯಲ್ಲ. ಅವರು ಅಲ್ಲಿ ವಾಸ ಇರುವುದಿಲ್ಲ ಎಂದು ಮುಂದುವರೆದು ನುಡಿಯುತ್ತಾರೆ. ನಿಪಿ12 ರಲ್ಲಿ ನೀಲಿ ಬಣ್ಣದಲ್ಲಿಕಾಣುವ ಮನೆ ನನ್ನ ಮನೆ ಎಂದರೆ ಸರಿ . ನನ್ನ ಮನೆಯ ಮುಖ್ಯ ಬಾಗಿಲು ದಕ್ಷಿಣ ದಿಕ್ಕಿಗೆ ಇದೆ. ನಿಪಿ 12 ರಲ್ಲಿ ಕಾಣುವ ಮನೆಯ ಹಿಂಭಾಗದಲ್ಲಿ 2 ಶೌಚಾ ಗೃಹಗಳು ಇವೆ ಎಂದರೆ ಸರಿ .

7. 2 ಶೌಚಾಲಯಗಳು ಲೋಕೇಶ ರವರ ಹಿಸ್ಸೆಗೆ ಬಂದ ಜಾಗದಲ್ಲಿ ಇವೆ ಎಂದರೆ ಹೌದು. ಆ ರೀತಿಯಾಗಿ ಅಜ್ಜಿ ಹೇಳುತ್ತಿದ್ದರು. 2 ಶೌಚಾಲಯಗಳ ಪೈಕಿ 1 ನ್ನು ನನಗೆ ಬಳಸಲು ಅನುವು ಮಾಡಿಕೊಡುವಂತೆ ಅಜ್ಜಿ ಅವರ ಮಾತಿನಂತೆ ಲೋಕೇಶ ರವರು ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿ . ನಿಪಿ12 ರಲ್ಲಿ ಕಾಣುವ ಚರಂಡಿಯಲ್ಲಿ ಲೋಕೇಶ ರವರ ಮನೆಯ ಕೊಳಚೆ ನೀರು ಹರಿದು ಬರುತ್ತದೆ ಎಂದರೆ ಸರಿ . ಆದರೆ ನಾವು ಇಲ್ಲದ ವೇಳೆಯಲ್ಲಿ ಮಾಡಿರುವ ಕಾರಣ ನಾನು ಅದರ ಸಂಬಂಧ ದೂರನ್ನು ಸಹ ನೀಡಿರುತ್ತೇನೆಂದು ಮುಂದುವರೆದು ನುಡಿಯುತ್ತಾರೆ.

8. ದೂರನ್ನು ನೀಡಿದ ದಿನಾಂಕ ನಿಖರವಾಗಿ ಗೊತ್ತಿಲ್ಲ. ನಿಪಿ9 ರಲ್ಲಿ ಕಾಣುವ ಗೇಟಿನ ಒಳಗೆ ತುದಿಯಲ್ಲಿ ಕಾಣುವ ಗೋಡೆ ಲೋಕೇಶ ರವರ ಮನೆಗೆ ಸೇರುತ್ತದೆ. ನಾನು ಗುರುತಿಸಿದ ಗೋಡೆಯಿಂದ ಲೋಕೇಶ ರವರ ಮನೆಯ ಬಾಗಿಲು ಪೂರ್ವದ ಕಡೆಗೆ ಇರುತ್ತದೆ ಎಂದರೆ ಸರಿ . . ಲೋಕೇಶ ರವರ ಮನೆ ಬಾಗಿಲಿನಿಂದ ತುಳಸಮ್ಮ ರವರ ಮನೆಯ ಗೋಡೆಯಿಂದ ಸ್ವಲ್ಪ ಜಾಗ ಇದೆ ಎಷ್ಟು ಎಂದು ನಿಖರವಾಗಿ ಗೊತ್ತಿಲ್ಲ. ಲೋಕೇಶರವರ ಮನೆ ಇರುವ ಸ್ಥಳದಿಂದಲೂ ನಿಪಿ9 ರಲ್ಲಿಕಾಣುವ ಗೇಟಿನ ವರೆಗೂ ಖಾಲಿ ಜಾಗ ಇದೆ ಎನ್ನುವುದು ಸರಿಯಲ್ಲ. 3 ಅಡಿ ಜಾಗ ಶೌಚಾಲಯಕ್ಕೆ ಹೋಗುವ ಸಲುವಾಗಿ ಬಿಡಲಾಗಿದೆ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲನ್ನು ಮಧ್ಯಾಹ್ನದ ನ್ಯಾಯಾಲಯದ ಕಲಾಪದ ವೇಳೆಯಲ್ಲಿ ಕೈಗೊತ್ತಿಕೊಳ್ಳುವಂತೆ ವಕಿಲರು ಕೋರಿದ್ದು ಅಂತೆಯೇ ಮಧ್ಯಾಹ್ನ ಕೈಗೊಳ್ಳಲಾಗುವುದು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓ. ಹೇ. ಕೇ. ಸ. ಇ. ಎ. ಒ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಭದ್ರಾವತಿ

ದಿನಾಂಕಃ 02.06.2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ಮಾಡಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀಮತಿ ಕೆ ಜಿ ಕೆ ವಕೀಲರಿಂದಃ

9. ನಿಪಿ8 ರಲ್ಲಿ ಹಳದಿ ಬಣ್ಣದಲ್ಲಿ ಕಾಣುವ ಮನೆ ವಾದಿಯದು ಗಿಣಿ ಹಸಿರು ಬಣ್ಣದಲ್ಲಿ ಮನೆ ನನಗೆ ಸೇರಿದ ಮನೆ ಎಂದರೆ ಸರಿ . ಎರಡು ಮನೆಗಳ ಮಧ್ಯದಲ್ಲಿ ಕಾಣುವ ಖಾಲಿ ಜಾಗದಲ್ಲಿ ಎರಡು ಶೌಚಾಲಯಗಳು ಇವೆ ಎಂದರೆ ಸರಿ . ಲೋಕೇಶ್ ರವರಿಗೆ ಇರುವ ಮನೆ ತಿಮ್ಮಮ್ಮ ರವರು ಜಾಗ ಖರೀದಿಸಿ ಕಟ್ಟಿಸಿದ ಮನೆ ಎಂದರೆ ಸರಿ . ನಿಪಿ8 ರಲ್ಲಿ ಕಾಣುವ ಲೋಕೇಶ್ ರವರ ಮನೆಯ ಕಿಟಕಿಯ ಪಕ್ಕದಲ್ಲಿಯೇ ಅದೇ ಮುಖವಾಗಿ ಬಾಗಿಲು ಇರುತ್ತದೆ ಎಂದರೆ ಸರಿ . ಅದನ್ನು ಹೊರತುಪಡಿಸಿ ಬೇರೆ ಬಾಗಿಲು ಇಲ್ಲ ಎಂದರೆ ಸರಿ .

10. ಲೋಕೇಶ್ ರವರ ಮನೆಯ ಮುಂದೆ ಕಾಣುವ ಪ್ಯಾಸೇಜ್ ಜಾಗ ಆ ಸ್ಥಳದಿಂದಲೂ ತುದಿಯಲ್ಲಿ ಕಾಣುವ ಗೇಟಿನ ವರೆಗೂ ಈ ದಿನದವರೆಗೂ ನಿಪಿ8 ರಲ್ಲಿ ಕಂಡುಬರುವ ರೀತಿಯಲ್ಲಿಯೇ ಇದೆ ಎಂದರೆ ಸರಿ . ನಿಪಿ8 ರಲ್ಲಿ ಮಣ್ಣು ತೆಗೆದಿರುವ ಜಾಗ ಕಾಣುತ್ತಿದ್ದು , ಅದನ್ನು ನಾವು ತೆಗೆದಿದ್ದೇವೆಂದರೆ ಸರಿ . ಆ ಜಾಗದಲ್ಲಿ ಶಿಟಿನ ಕೊಟ್ಟಿಗೆ ಇತ್ತು. ಅದನ್ನು ತೆಗೆದು ನಾವು ಸ್ವಲ್ಪ ಜಾಗ ಸೇರಿಸಿ ಮನೆ ಕಟ್ಟಲು ಮುಂದಾದೆವು ಆಗ ಲೋಕೇಶ್ ರವರು ತಕರಾರು ಮಾಡಿದರು. ಆ ಕಾಲಕ್ಕೆ ಮಣ್ಣಿನ ಪಕ್ಕದಲ್ಲಿ ಕಂಡುಬರುವ ಕಲ್ಲು ಕಂಬಗಳನ್ನು ನಾವು ತೆಗೆಯಲು ಮುಂದಾದೆವು ಎನ್ನುವುದು ಸರಿಯಲ್ಲ.

11. ನಿಪಿ9 ರಲ್ಲಿ ಕಾಣುವ ಗೇಟಿನ ನಂತರದ ಜಾಗ ದಲ್ಲಿ ಮಣ್ಣನ್ನು ಪಾಯ ಹಾಕುವ ಸಮಯಕ್ಕೆ ನಾವು ತೆಗೆದಿದ್ದೇವೆ. ಅದಕ್ಕೆ ವಾದಿಗಳು ತಕರಾರು ಮಾಡಿದರು. ನಿಪಿ10 ರಲ್ಲಿ ಕಾಣುವ ಗಿಣಿ ಹಸಿರು ಮನೆಗೆ ನಾನು ಈಗ ಹೆಚ್ಚಾಗಿ ಒಂದು ಬಚ್ಚಲು ಮನೆಯನ್ನು ಕಟ್ಟಿಕೊಂಡಿದ್ದೇನೆ. ನಿಪಿ10 ರಲ್ಲಿ ಕಾಣುವ ಗೇಟಿನ ಮಾರ್ಗವಾಗಿಯೇ ನನ್ನ ಮನೆಗೆ ಹಾಗೂ ಲೋಕೇಶ್ ರವರ ಮನೆಗೆ ಹೋಗುಬೇಕು ಎನ್ನುವುದು ಸರಿಯಲ್ಲ. ಗೇಟಿನ ಮಾರ್ಗವಾಗಿ ಹೊಗುವ ಇರುವ ದಾರಿ ಕೇವಲ ನನ್ನ ಮನೆಗೆ ಮಾತ್ರ ಎಂದು ನುಡಿಯುತ್ತಾರೆ. ಗೇಟನ್ನು

ತಿಮ್ಮಮ್ಮ ರವರ ಕಾಲದಲ್ಲಿಯೇ ಇರಿಸಲಾಗಿತ್ತು ಎಂದರೆ ಸರಿ . ಆದರೆ ಅದು ನಾನು ಈಗ ಇರುವ ಮನೆಯ ಸಲುವಾಗಿ ಇರಿಸಲಾಗಿದ್ದು , ಲೋಕೇಶ್ ರವರ ಮನೆಗೆ ಎದುರಿನಿಂದ ದಾರಿ ಇತ್ತು ಎಂದು ನುಡಿಯುತ್ತಾರೆ. ಲೋಕೇಶ ರವರ ಮನೆಗೆ ಹೋಗಲು ನಿಪಿ10 ರಲ್ಲಿ ಕಾಣುವ ಗೇಟಿನಿಂದ ಹೋಗುವ ದಾರಿಯನ್ನು ಬಿಟ್ಟು ಬೇರೆ ದಾರಿ ಇಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಅದರ ಕುರಿತು ನನಗೆ ಮಾಹಿತಿ ಇದ್ದರೂ ಸಹ ಅದನ್ನು ಮರೆಮಾಚಿ ಸುಳ್ಳು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ.

12. ಓಣಿ ವಿಚಾರವಾಗಿ ನನ್ನ ಹಾಗೂ ವಾದಿ ನಡುವೆ ಪರಸ್ಪರ ಪ್ರಕರಣಗಳು ದಾಖಲಾಗಿವೆ ಎಂದರೆ ಸರಿ . ವಾದಿ ನೀಡಿರುವ ದೂರು ಸಂಬಂಧ ಭದ್ರಾವತಿಯ ಮಾನ್ಯ 4 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣ ಚಾಲ್ತಿಯಲ್ಲಿದೆ ಎಂದರೆ ಸರಿ . ನಿಪಿ8 ರಲ್ಲಿ ಕಾಣುವ ಓಣಿ ಜಾಗವನ್ನು ವಾದಿ ಬಳಸಲು ಅನುವು ಮಾಡಿಕೊಟ್ಟರೇ ನನಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ ಎಂದರೆ ನನಗೆ ಇರುವ ಜಾಗದಲ್ಲಿ ನಾನು ಅವರಿಗೆ ಅದನ್ನು ಬಳಸಲು ಬಿಡಲು ಇಚ್ಚಿಸುವುದಿಲ್ಲ , ಪಕ್ಕದವರು ಹೆಚ್ಚುವರಿಯಾಗಿ ಒತ್ತುವರಿ ಮಾಡಿಕೊಂಡು ಬಂದಿದ್ದಾರೆ ಮತ್ತು ಅದಕ್ಕೆ ವಾದಿ ಸಪೋರ್ಟ್ ಮಾಡಿದ್ದಾರೆ ಎಂದು ನುಡಿಯುತ್ತಾರೆ.

13. ಲೋಕೇಶ್ ರವರು ಮನೆಯನ್ನು ಬಾಡಿಗೆದಾರರಿಗೆ ನೀಡಿದ್ದಾರೆ ಅದಕ್ಕೆ ಕಾರಣ ನಾವು ಲೋಕೇಶ ರವರಿಗೆ ಹಿಂಸೆ ನೀಡಿರುವುದು ಆಗಿದೆ ಎನ್ನುವುದು ಸರಿಯಲ್ಲ. ದಿಃ 21.04.2015 ರಂದು ವಾದಿ ಹಾಗೂ ಆತನ ಹೆಂಡತಿ ವಿರುದ್ಧ ಸುಳ್ಳು ದೂರನ್ನು ನೀಡಿ ಸುಳ್ಳು ಆರೋಪ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಗೇಟಿನ ಮೂಲಕ ವಾದಿ ಆತನ ಮನೆಗೆ ಓಡಾಡಲು ನಾನು ತಕರಾರು ಮಾಡಿರುತ್ತೇನೆ ಎಂದರೆ ಸರಿ . ಅದಕ್ಕೆ ಕಾರಣ ಆ ಮಾರ್ಗ ನಮಗೆ ಸೇರಿದ್ದು ಎಂದು ಮತ್ತು ವಾದಿಗೆ ಕನ್ಸರವೆನ್ಸಿ ಕಡೆಯಿಂದ ಓಡಾಡಲು ಇರುವುದು ಆಗಿರುತ್ತದೆ. ಅಲ್ಲಿ ಯಾವುದೇ ಕನ್ಸರವೆನ್ಸಿ ಇರುವುದಿಲ್ಲ ಎನ್ನುವುದು ಸರಿಯಲ್ಲ. ದಿಃ 21.04.15 ರಂದು ಲೋಕೇಶ್ ರವರು ಹೊಸಪೇಟೆಯಲ್ಲಿ ತನ್ನ ಕೆಲಸದಲ್ಲಿ ಇದ್ದರು ಎಂದರೆ ಅದರ ಬಗ್ಗೆ ಗೊತ್ತಿಲ್ಲ. ಆತನ ಹೆಂಡತಿ , ಆತನ ಹೆಂಡತಿಯ ಭಾವ , ಅಕ್ಕ ಬಂದು ಕೆಲಸದವರನ್ನು ವಾಪಸ್ಸು ಕಳುಹಿಸಿದರು. ದಿಃ 21.04.15 ರ ಬೆಳಗ್ಗೆ 9.30 ರ ಸುಮಾರಿಗೆ ವಾದಿ ಮತ್ತು ಆತನ ಕುಟುಂಬಸ್ಥರಿಗೆ ಓಡಾಡಲು ತೊಂದರೆ ನಾವೇ ನೀಡಿ ನಂತರ ಅವರುಗಳ ವಿರುದ್ಧ ಸುಳ್ಳು ದೂರನ್ನು ಕೊಡಲಾಗಿದೆ ಎನ್ನುವುದು ಸರಿಯಲ್ಲ. ನಿಪಿ 10 ರಲ್ಲಿ ಕಾಣುವ ದಾರಿಯನ್ನು ಹೊರತುಪಡಿಸಿ ವಾದಿ ಮನೆಗೆ ತಲುಪಲು ಬೇರೆ ಯಾವುದೇ ದಾರಿ ಇಲ್ಲ ಎನ್ನುವುದು ಸರಿಯಲ್ಲ. ಕನ್ಸರವೆನ್ಸಿ ದಾರಿ ಇದೆ ಎನ್ನುತ್ತಾರೆ. ಲೋಕೇಶ್ ರವರ ಮನೆಯ

ಪೂರ್ವ ದಿಕ್ಕಿಗೆ ಸದರಿ ಕನ್ಸರವೆನ್ಸಿ ದಾರಿ ಬರುತ್ತದೆ. ಸ್ಥಳದಲ್ಲಿ ಲೋಕೇಶ್ ರವರಿಗೆ ಅವರ ಮನೆ ತಲುಪುವ ಸಲುವಾಗಿ ಕನ್ಸರವೆನ್ಸಿ ದಾರಿ ಇದೆಯೋ ಇಲ್ಲವೋ ಎಂದು ತಿಳಿಯುವ ಸಲುವಾಗಿ ನ್ಯಾಯಾಲಯದಿಂದ ಆಯುಕ್ತರನ್ನು ನೇಮಕ ಮಾಡಿದಲ್ಲಿ ಅದಕ್ಕೆ ನನ್ನ ತಕರಾರು ಇರುವುದಿಲ್ಲ. ಲೋಕೇಶ್ ರವರಿಗೆ ತೊಂದರೆ ನೀಡಿದ ಪಕ್ಷದಲ್ಲಿ ಬೇರೆ ದಾರಿ ಇಲ್ಲದೆ ಆತ ತನ್ನ ಮನೆಯನ್ನು ನನಗೆ ಮಾರಾಟ ಮಾಡುತ್ತಾನೆ ಎಂಬ ದುರುದ್ದೇಶದಿಂದ ನಾನು ಹಾಗೂ ನನ್ನ ತಾಯಿ ಲೋಕೇಶ್ ನಿಗೆ ತೊಂದರೆ ನೀಡುತ್ತಾ ಬಂದಿದ್ದೇವೆ ಎನ್ನುವುದು ಸರಿಯಲ್ಲ. ಸುಳ್ಳು ಅಂಶಗಳನ್ನು ಒಳಗೊಂಡ ಪ್ರತಿವಾದ ಪತ್ರ , ನನ್ನ ಮುಖ್ಯ ವಿಚಾರಣ ಪ್ರಮಾಣ ಪತ್ರವನ್ನು ಸಲ್ಲಿಸಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅನ್ನುವುದು ಸರಿಯಲ್ಲ. ವಾದಿ ದಾವೆಯಲ್ಲಿ ಕೋರಿರುವ ಪರಿಹಾರ ಪಡೆಯಲು ಆತ ಅರ್ಹನು ಎನ್ನುವುದು ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓ. ಹೇ. ಕೇ. ಸ. ಇ. ಎ. ಒ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಭದ್ರಾವತಿ